# ಪರಾವರ್ತನ

**ಶಶಿಕಲಾ ಬಾಯಾರು**

ಕಲೆ: ಡಿ.ಕೆ. ರಮೇಶ್



ಆಪ್ತ ಇತಿಹಾಸವೊಂದರ ಅಗಣಿತ ಪುಟಗಳನ್ನು ತನ್ನೊಳಗೆ ಎಳೆದಿಟ್ಟು ನಿಶ್ಚಲ ನಿಷ್ಕಾಮ ನಿಲುವಿನಲ್ಲಿ ಗಮನೀಯವೆನಿಸಿದ್ದ ಆ ಕಪಾಟನ್ನು ಆ ಜಾಗದಿಂದ ಕದಲಿಸುವುದು ನನಗೆ ಸರ್ವಥಾ ಸಮ್ಮತವಿರಲಿಲ್ಲ. 'ನಿನ್ನ ರೂಮಿನಲ್ಲಿ ಇಟ್ಟುಬಿಡೋಣ ಬೇಕಾದರೆ' ಅಂದ ಮಗ. ಸೊಸೆಯ ನೋಟದಲ್ಲಿ ಅವಿತುಕೂತ ಒತ್ತಾಯವಿತ್ತು. ಅವರಿಗೆ ಅದೊಂದು ವಸ್ತು. ಮನೆ ಕಟ್ಟಿದ ಮೇಲೆ ಮೂವತ್ತು ವರ್ಷಗಳಿಂದ ಹಾಲಿನಲ್ಲಿ ಎದುರು ಗೋಡೆಯ ಮುಂದೆ ತನ್ನೆಲ್ಲಾ ಘನತೆ–ಗೌರವಗಳನ್ನು ಹಾಗೇ ಉಳಿಸಿಕೊಂಡು ಸ್ಥಿರವಾಗಿ ತಪಸ್ವಿಯಂತೆ ನಿಂತ ಈ ಆಸ್ತಿ ನಿರ್ಜೀವ ಅನಿಸದೆ ಹಲವು ಭಾವಕೋಶಗಳ ಅಪೂರ್ವ ಸಂಕಲನವಾಗಿತ್ತು. ನನ್ನ ಪಾಲಿಗಂತೂ ಅಸಂಖ್ಯ ಅನುಭವಗಳ ಜೀವಂತ ಸಂಕೇತವಾಗಿತ್ತು. ಬಾಲ್ಯದ ಒಡನಾಡಿ, ಯೌವನದ ಸಂಗಾತಿ. ಈಗ ವಯಸ್ಸುಕಾಲಕ್ಕೆ ಸದಾ ಸಹವಾಸಿಯಾಗಿ ಪರಿಣಮಿಸಿತ್ತು. ತನ್ನೊಳಗೆ ಹೊತ್ತ ಅಸಂಖ್ಯ ಪುಸ್ತಕಗಳ ನಡುವೆ ಒಲವಿನ ಹಲವಾರು ಒತ್ತುಗಳನ್ನು ಬಚ್ಚಿಟ್ಟಿರುವುದು—